ಕಂಡ ಬದುಕು, ಅನುಭವವನ್ನು ಕಾವ್ಯವಾಗಿಸಿ, ರಾಗ ಕಟ್ಟಿ ಹಾಡುವವನ ಒಟ್ಟು ಸಂಗೀತ ಅವನ ಜೀವನ ದರ್ಶನ, ಅನುಭೂತಿಯೇ ಆಗುತ್ತದೆ. ಸೂಫಿಗಳು, ದಾಸರು, ಶರಣರು, ತತ್ವಪದಕಾರರು, ವಚನಕಾರರದೂ ಒಂದೊಂದು ಬಗೆಯ ಸೋಪಜ್ಞ ಭಾವಾನುಭೂತಿ. ಜನಪದರದೋ ಆ ಕಾಲದ ಜಗತ್ತಿನ ನಂಬಿಕೆ, ಮೌಲ್ಯ. ಖುಷಿ, ನೋವು ಇತ್ಯಾದಿ. ಅನಂತದೆಡೆಗಿನ ತುಡಿತದ್ದಲ್ಲ. ಬದುಕಿಗೆ ಹತ್ತಿರದ್ದು, ಹಾಗೆಯೇ ಪಾಪ್, ರಾಕ್ ಸಂಗೀತ ಪಶ್ಚಿಮೀ ಜನಪದ ಸಂಸ್ಕೃತಿ. ಬಾಳುತ್ತಿರುವ ಕಾಲ, ಪರಿಸರದ ಅನುಭೂತಿ. ಒಂದಷ್ಟು ದೂರಕ್ಕೆ ಸಾಗಲು ಕಟ್ಟಿಕೊಳ್ಳಬಹುದಾದ ಬುತ್ತಿ,

ಫಾರೂಖ್ ಬಲ್ಸಾರಾ ತನ್ನನ್ನು ಫ್ರೆಡ್ಡೀ ಮರ್ಕ್ಯೂರಿ ಎಂದು ಕರೆದುಕೊಂಡ. ಫ್ರೆಡ್ಡೀ ಹೆಸರಿನಿಂದ ಛೇಡಿಸುತ್ತಿದ್ದುದು ಆತನ ಪಂಚಗನಿ ಸ್ಕೂಲ್ ಟೀಚರ್. ಅದನ್ನೇ ಪ್ರೀತಿಯಿಂದ ಒಪ್ಪಿ ಆ ಹೆಸರಲ್ಲೇ ಬಾಳುವ ನಿರ್ಧಾರ ತೆಗೆದುಕೊಂಡ. ತನ್ನ ಸಂಗೀತ ಮೆಚ್ಚುತ್ತಿದ್ದ ಟೀಚರ್ ಎನ್ನುವ ಚೇತನಕ್ಕೆ ಕೊಟ್ಟ ಬಹುದೊಡ್ಡ ಗೌರವ ಅದು. ಫ್ರೆಡ್ಡೀ ಅದೆಷ್ಟೊ ಯಶಸ್ವಿ ಅಲ್ಬಂಗಳನ್ನು ಹೊರತಂದ. ತಾನೇ ಹಾಡುಗಳನ್ನು (ಅಂಡರ್ ಪ್ರೆಶರ್, ಐ ವಾಂಟ್ ಟು ಬ್ರೇಕ್ ಫ್ರೀ, ಬಾರ್ಸಿಲೋನಾ, ಒನ್ ವಿಷನ್, ದಿ ಗ್ರೇಟ್ ಪ್ರಿಟೆಂಡರ್, ಕ್ರೇಜಿ ಲಿಟ್ಲ್ ಥಿಂಗ್ ಕಾಲ್ಡ್ ಲವ್, ಬೊಹೆಮಿಯನ್ ರಾಪ್ಸೊಡಿ, ಡೋಂಟ್ ಸ್ಟಾಪ್ ಮೀ ನೌ, ರೇಡಿಯೊ ಗಾಗಾ... ಇತ್ಯಾದಿ) ಬರೆದು ಹಾಡಿದ. ಯಶಸ್ಸು, ಕೀರ್ತಿ, ಹಣ ಎಲ್ಲ ಅವನ ಅಟ್ಟಾಡಿಸಿಕೊಂಡು ಬಂದವು. ಮತ್ತದೇ ಸ್ವತಂತ್ರ ಮನಸ್ಥಿತಿ.

ಯಶಸ್ಸಿನ ನಡುವೆಯೂ ಫ್ರೆಡ್ಡೀ ಏಕಾಂಗಿತನ ಎದುರಿಸುವಂತಾಗಿದ್ದು ದುರದೃಷ್ಟಕರ. ತನ್ನ ಬೈಸೆಕ್ಸ್ಯುಲ್ ಕಾಮನೆಯಿಂದ ತುಂಬ ಇಷ್ಟಪಡುವ ಗೆಳತಿಯ ಸಂಗವನ್ನು, ತಾನಿಷ್ಟಪಟ್ಟ ಪುರುಷ ಸಂಗಾತಿಯನ್ನು ಬಿಟ್ಟುಕೊಡದ ಇಕ್ಕಟ್ಟಿಗೆ ಸಿಲುಕುವಂತಾಗಿದ್ದು ಅವನ ಬದುಕಿನ ಬಹುದೊಡ್ಡ ಸಂದಿಗ್ಧತೆ. ಎರಡರಲ್ಲೂ ಸುಖ ಉಂಡ ಅವನಿಗೆ ಯಾವುದನ್ನೂ ಬಿಟ್ಟುಕೊಡದ ಸ್ಥಿತಿ. ಆತ್ಮವಂಚನೆಯಿಂದ ಪಾರಾಗುವುದಕ್ಕೆ ಗೆಳತಿಯ ಮುಂದೆ ತಾನು ಬೈಸೆಕ್ಸ್ಯುಲ್ ಎಂದು ಹೇಳಿಕೊಳ್ಳುವ ಮಾರ್ಗ ಆಯ್ದುಕೊಂಡಿದ್ದು ಅವನಿಡೀ ಬದುಕನ್ನೇ ಅಲ್ಲಾಡಿಸಿತು. ಬ್ಯಾಂಡ್ ಜೊತೆಗಿನ ಸಂಬಂಧದಲ್ಲೂ ಬಿರುಕು. ಮತ್ತೆ ಏಕಾಂಗಿ.

ಇನ್ನು ಸೂಕ್ತ ಸಾಂಗತ್ಯ ಇಲ್ಲದೇ ಸಂಗೀತವಾದರೂ ಬದುಕುವುದು ಹೇಗೆ? ಅದೂ ಮನುಷ್ಯ ಬದುಕಿನ ಹಾಗಲ್ಲವೇ.. ಬ್ಯಾಂಡ್ ಪುನರ್‌ರೂಪಿಸಿಕೊಂಡು ಮುಂದುವರಿದ. ಸಂಗೀತ ವ್ಯಾಪಾರ ಜಗತ್ತು ಬೆನ್ನಟ್ಟಿತು. ಷೋಗಳ ಮೇಲೆ ಷೋಗಳು. ದಣಿದ, ಸುಸ್ತಾದ, ಬಳಲಿದ. ದೂರಾದ ಸಂಗಾತಿಯ ನೆನಪು ಕಾಡಿ ವಿರಹ ವೇದನೆಯಿಂದ ನೊಂದ. ಪುರುಷ ಸಂಗಾತಿಯ ಮುನಿಸಿನಿಂದ ಅಂಥ ಲೈಂಗಿಕ ಬದುಕಿನ ಮೇಲಿನ ಸೇಡಿನಂತೆ ಷೋ ನಿಗದಿಯಾದಲ್ಲೆಲ್ಲ ಹತ್ತಾರು ಪುರುಷ ಸಂಗಾತಿಗಳ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದ ಎಂದೆಲ್ಲ ಮಾಧ್ಯಮಗಳು ಹಲುಬುವಷ್ಟು ತಲುಬಿಲಿಗೆ ಜಾರಿದ. ಇಂಥ ವಿಚಿತ್ರ ಕಾಮನೆಗಳಲ್ಲಿ ಕೊಚ್ಚಿ ಹೋಗಿದ್ದು ಅಂತಃಸಾಕ್ಷಿ. ಚೇತರಿಕೆಗೆ ಸಂಗಾತಿ ಬೇಕೆನಿಸಿ ತೀವ್ರ ತುಡಿವಾಗ ಆಕೆ ಮತ್ತೊಬ್ಬನ ತೋಳಬಂಧಿ! ಈ ಆಘಾತಗಳಲ್ಲಿ ನಲುಗಿ ಹತೋಟಿ ಮೀರಿದ ದೈಹಿಕ ಕಾಮನೆಗಳಿಂದ ಏಡ್ಸ್ ಮಾರಕ ರೋಗ ಆವರಿಸಿಕೊಂಡಿತು. 'ನಾನು ಹೀಗೆ ಸೋಲಲಾರೆ' ಎನ್ನುವ ಉಮೇದಿಯೂ ಪುಟಿದೆದ್ದಿತು. ಯಾರೊಂದಿಗೂ ಹೇಳಿಕೊಳ್ಳದ ಈ ನೋವನ್ನು ತನ್ನ ಬ್ಯಾಂಡ್‌ನ ಸಾಥಿಗಳೊಂದಿಗೆ ಮಾತ್ರ ಹಂಚಿಕೊಂಡಿದ್ದು ಆತನ ಉತ್ಕಟ ಸ್ನೇಹ, ನಂಬಿಕೆಯ ಪ್ರತೀಕ.

ತನ್ನ ನಲವತ್ತೊಂದನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದು ಇತಿಹಾಸ ಕಂಡು ಕೇಳರಿಯದಂಥದ್ದಾಗಿತ್ತು. ಅದು ಏಡ್ಸ್ ಎನ್ನುವ ಮಹಾರೋಗ ಖಚಿತಗೊಂಡ ನಂತರದಲ್ಲಿ ನೋವ ಮರೆಯುವ ಅವನದೇ ವಿಧಾನವಾಗಿತ್ತು. 'ಗೇ ಬಾರ್'ನಲ್ಲಿ ಆ ಬರ್ತ್‌ಡೇ ಪಾರ್ಟಿಗೆ ಏಳುನೂರಕ್ಕೂ ಹೆಚ್ಚು ಆಪ್ತ ಬಳಗ ಜಮಾಯಿಸಿತ್ತು. ಎರಡು ಮೀಟರ್ ಉದ್ದದ ಸ್ಪಾಂಜ್‌ಕೇಕ್! ಅದರ ಮೇಲೆ ಆತನ ಬಾರ್ಸಿಲೋನಾ ಹಾಡಿನ ಸಾಲು, ಕುಡಿತದ ಅಮಲಿನಲ್ಲಿ ಮಿಂದವರೆಷ್ಟೊ.. ಇಂಥ ವಿಚಿತ್ರ ಖಯಾಲಿ, ಎದೆಗಾರಿಕೆ ಮತ್ತು ಜೀವಪ್ರೀತಿ ಈ ಸಂಗೀತಗಾರನ ಹಾಡುಗಳ ಜೀವಾಳ. ಇಂಥ ಸೆಳೆತದಿಂದಲೇ ವಿಶ್ವಾದ್ಯಂತ ಅಭಿಮಾನಿಗಳ ಮಹಾಸಾಗರ ಫ್ರೆಡ್ಡೀ ಹಾಡಿಗೆ ತಲೆ ತೂಗಿದ್ದು. 'ವೀ ವಿಲ್ ವೀ ವಿಲ್ ರಾಕ್ ಯು...' ಹಾಡಿಗೆ ಕುಣಿಯದವರುಂಟೇ?

ಏಡ್ಸ್, ಎಚ್‌ಐವಿ ಪಾಸಿಟಿವ್ ಸೋಂಕು ಎನ್ನುವ ರೋಗದ ಹೊಸ ಪರಿಭಾಷೆಗೆ ಜಗತ್ತು ಆಗಷ್ಟೇ ತಲ್ಲಣಗೊಳ್ಳಲಾರಂಭಿಸಿತ್ತು. ಮಾಧ್ಯಮದಲ್ಲಿ ಎಚ್‌ಐವಿ ಪಾಸಿಟಿವ್ ಫ್ರೆಡ್ಡೀ ಬಗ್ಗೆ ಪುಂಖಾನು ಪುಂಖವಾಗಿ ಕತೆಗಳು. ಆಗಲೂ ಆತ ಹೇಳಿದ್ದು– 'ಬರೀರಿ, ನನ್ನ ಬಗ್ಗೆ ಇನ್ನೂ ಬರಿರಿ. ನಾನದನ್ನೇ ಹಾಡುತ್ತೇನೆ, ಹಾಡು ಕಟ್ಟುತ್ತಲೇ ಹೋಗುತ್ತೇನೆ, ನಾನು ಹೋದ ಮೇಲೆ ಹಾಡನ್ನು ನೀವು ಪೂರ್ಣಗೊಳಿಸಿ'..

ಏಡ್ಸ್ ರೋಗ ಫ್ರೆಡ್ಡೀ ಮರ್ಕ್ಯೂರಿಯನ್ನು ತಿಂದು ಹಾಕಲಾರಂಭಿಸಿತ್ತು. ಬ್ಯಾಂಡ್ ಮ್ಯಾನೇಜರ್‌ನನ್ನು ಕರೆಯಿಸಿಕೊಂಡು ಪತ್ರಿಕಾಗೋಷ್ಠಿಗೆ ಏರ್ಪಾಡು ಮಾಡಿ ಏಡ್ಸ್ ಕಾಯಿಲೆಯ ಬಗ್ಗೆ ಅಧಿಕೃತವಾಗಿ ಘೋಷಿಸಿಕೊಂಡ. 'ಜಗತ್ತಿನಲ್ಲಿ ಏಡ್ಸ್‌ನಿಂದ ಮುಕ್ತವಾಗಲು ಸಂಘರ್ಷ ನಡೆಸುತ್ತಿರುವ ರೋಗಿಗಳು, ಹೋರಾಡುವ ವೈದ್ಯರು, ಸೇವಾ ಸಂಸ್ಥೆಗಳವರ ಆತ್ಮಸ್ಥೈರ್ಯ ಹೆಚ್ಚಿಸಲು ಈ ಹೇಳಿಕೆ ನೆರವಾಗಬಹುದು. ನನ್ನ ಆಪ್ತರ ವಿಶ್ವಾಸಕ್ಕೆ ತುಂಬ ಹಿಂದೆಯೇ ಅವರಲ್ಲಿ ಹೇಳಿಕೊಂಡಿದ್ದೆ. ಅಭಿಮಾನಿಗಳಿಗೆ ನೋವಾಗದಿರಲೆಂದು ಜಾಹೀರುಗೊಳಿಸಿರಲಿಲ್ಲ. ಈಗ ಕಾಲ ಬಂದಿದೆ. ನನಗೆ ಏಡ್ಸ್ ರೋಗ ಆವರಿಸಿದ್ದು ನಿಜ' ಎಂದು ಘಂಟಾಘೋಷವಾಗಿ ಸಾರಿಬಿಟ್ಟ. ಹೀಗೆ ಸಾರಿ 24 ಗಂಟೆಗಳೂ ಕಳೆದಿರಲಿಲ್ಲ. 1991ರ ನವೆಂಬರ್ ತಿಂಗಳು 24ನೇಯ ತಾರೀಖಿನಂದು ಸಂಜೆ ತನ್ನ 45ರ ಹರೆಯದಲ್ಲಿ ಇಹಲೋಕ ತ್ಯಜಿಸಿದ. ಅಭಿಮಾನಿಗಳ ಕಣ್ಣೀರು, ನೋವು, ಆಕ್ರಂದನ ಅಕ್ಷರಶಃ ಬಾನು ಸ್ಪರ್ಶ..

ಅಂತ್ಯಕ್ರಿಯೆ ಜೊರಾಸ್ಟ್ರಿಯನ್ ಪಾದ್ರಿಯ ನೇತೃತ್ವದಲ್ಲಿ ಫಾರಸೀ ಆಚರಣೆಯಂತೆಯೇ ನೆರವೇರಿತು. ಆತನ ಗೆಳತಿ ಮೇರಿ ಆಸ್ಟಿನ್, ಕುಟುಂಬದ ಮೂವತ್ತೈದು ಸದಸ್ಯರು, ಕ್ವೀನ್ಸ್‌ಬ್ಯಾಂಡ್ ಸದಸ್ಯರು, ಹೆಸರಾಂತ ಪಾಪ್‌ರಾಕ್ ತಾರೆ ಎಲ್ಟನ್ ಜಾನ್ ನೆರೆದಿದ್ದರು. ಅಂತ್ಯಕ್ರಿಯೆಯ ವಿಧಿ ವಿಧಾನಗಳ ನಂತರ ಅವಶೇಷಗಳನ್ನು ಆತನ ಅಪೇಕ್ಷೆಯಂತೆ ಗೆಳತಿ ಮೇರಿ ಅಜ್ಞಾತ ಸ್ಥಳವೊಂದರಲ್ಲಿ ಹೂತರು. ಆ ಬಗ್ಗೆ ಆಕೆ ಎಂದೂ ಯಾರಲ್ಲೂ ಬಾಯಿ ಬಿಡಲಿಲ್ಲ.

## ಈತ ನಿಜವಾದ ತ್ಯಾಗಿ ಕರ್ಣ!

ಪಶ್ಚಿಮೀ ಸಂಗೀತದ ಅಪ್ರತಿಮ ತಾರೆ ಫ್ರೆಡ್ಡೀ ಮರ್ಕ್ಯೂರಿ, ತನ್ನ ವಿಲ್‌ನಲ್ಲಿ ತನ್ನೆಲ್ಲ ಆಸ್ತಿ, ಗಳಿಕೆಯನ್ನು ಆಪ್ತರಲ್ಲೇ ಹಂಚಿದ್ದ. ಮುಖ್ಯವಾಗಿ ತನ್ನ ಅಡುಗೆ ಮನೆಯ ಷೆಫ್ ಜೊ ಫನೇಲಿಗೆ, ಆಪ್ತ ಸಹಾಯಕ ಪೀಟರ್ ಫ್ರೀಸ್ಟೋನ್‌ಗೆ ಮತ್ತು ತನ್ನ ಪುರುಷ ಸಂಗಾತಿ ಜಿಮ್ ಹಟನ್‌ಗೆ ತಲಾ ಐದು ಲಕ್ಷ ಪೌಂಡ್, ಡ್ರೈವರ್ ಟೆರೀ ಗಿಡಿಂಗ್ಸ್‌ಗೆ ಒಂದು ಲಕ್ಷ ಪೌಂಡ್ ಬರೆದಿಟ್ಟಿದ್ದ. ತನ್ನ ಮನೆ, ಅಲ್ಬಂ ಹಾಡುಗಳ ಹಕ್ಕುಗಳನ್ನು ಗೆಳತಿ ಮೇರಿ ಆಸ್ಟಿನ್ ಮತ್ತು ತನ್ನ ಕುಟುಂಬದ ಸದಸ್ಯರಲ್ಲಿ ಹಂಚಿದ್ದ. ಕೆನ್ಸಿಂಗ್ಟನ್‌ನಲ್ಲಿರುವ ರಾಕ್‌ಸ್ಟಾರ್ ಭವ್ಯ ಮನೆ ಗಾರ್ಡನ್ ಲಾಡ್ಜ್ ಅನ್ನು ಮೇರಿ ಆಸ್ಟಿನ್‌ಗೆ ಬರೆದಿಟ್ಟ. ಈಗಲೂ ಮನೆಯ ಕಾಂಪೌಂಡ್ ತುಂಬ ರಾಶಿ ಸಂದೇಶಗಳು ರಾರಾಜಿಸುತ್ತವೆ. ಲಂಡನ್‌ನಲ್ಲಿ ಅದೀಗ ಪಾಪ್ ಸಂಗೀತ ಪ್ರೇಮಿಗಳ ಪಾಲಿನ ಪವಿತ್ರ ಕ್ಷೇತ್ರ.

ಏಡ್ಸ್ ರೋಗದಿಂದ ನಲುಗುವ ಜೀವಗಳಿಗೆಂದೇ ಸಹಾಯಾರ್ಥ (ಲೈವ್ ಏಡ್ ಷೋ) ಸಂಗೀತ ಕಚೇರಿಯಲ್ಲಿ (1985ರಲ್ಲಿ) ಜನಸಾಗರ! ಅದಮ್ಯ ಚೈತನ್ಯದ ಬ್ಯಾಂಡ್ ಇಟ್ಟುಕೊಂಡು ಲಕ್ಷ ಸಭಿಕರೆದುರು ಅದೆಂಥ ಮೋಡಿಯ ಹಾಡುಗಾರಿಕೆ, ಏಡ್ಸ್ ಬಗ್ಗೆ ಕರುಳ ಮಿಡಿಯುವ ಸ್ಪಂದನ. ತಾನನುಭವಿಸಿದ ಭೀಕರ ಯಾತನೆ ಜಗದ ಯಾವ ಕುಡಿಯನ್ನೂ ಸ್ಪರ್ಶಿಸಬಾರದು. ತನ್ನೊಂದಿಗೇ ಕೊನೆಯಾಗಲಿ ಎನ್ನುವರ್ಥದ ಅವನ ಹಾಡನ್ನು ಜಗತ್ತು ಮರೆಯಲಾದೀತೆ? ಆ ಮೋಡಿಗಾರ ಫಾರೂಖ್ ಬಲ್ಸಾರಾ ಅಲಿಯಾಸ್ ಫ್ರೆಡ್ಡೀ ಮರ್ಕ್ಯೂರಿ ನಿಸ್ಸಂಶಯವಾಗಿ ಪಶ್ಚಿಮೀಸಂಗೀತ ಲೋಕ ಬೆಳಗಿದ ಸ್ಟಾರ್! ಇದು ಪವಾಡವಲ್ಲ. ಧೇನಸ್ಥ ಮನಸಿನ, ವಿಚಿತ್ರ ಭಾವತೀವ್ರತೆಗಳ, ಲೈಂಗಿಕತೆಯ ಭಿನ್ನ ತುಡಿತದ ಸಂಗೀತಗಾರನೊಬ್ಬನ ಅನುಭಾವ ಜಗತ್ತು.

ಇಂಡಿಯಾ ಮೂಲದ ಈ ಬ್ರಿಟಿಷ್ ರಾಕ್ ಸ್ಟಾರ್. 'ಬ್ಯಾಂಡ್ ಕ್ವೀನ್'ನ ಮುಂಚೂಣಿ ಹಾಡುಗಾರ 'ಫ್ರೆಡ್ಡೀ ಮರ್ಕ್ಯೂರಿ' ಸಂಗೀತ ಯಾನ, ಆತನ ನಿಜ ಬದುಕಿನ ದರ್ಶನ ಮಾಡಿಸುವ ಯತ್ನವನ್ನು ಹಾಲಿವುಡ್ ಸಿನಿಮಾವೊಂದು ಮಾಡಿದೆ. ಆತ ಕಾಲವಾಗಿ 27 ವರ್ಷಗಳ ನಂತರ ಇದೇ ನವೆಂಬರನಲ್ಲಿ ತೆರೆ ಕಂಡ 'ಬೊಹಿಮಿಯಾನ್ ರಾಪ್ಸಿಡಿ' ಸಿನಿಮಾ ಅತ್ಯಂತ ಅರ್ಥಪೂರ್ಣವಾಗಿದೆ.

'ಈಸ್ ಧಿಸ್ ದಿ ವರ್ಲ್ಡ್ ವೀ ಕ್ರಿಯೇಟೆಡ್.. ಎವರೀ ಡೇ ದಿ ಹೆಲ್ಪ್‌ಲೆಸ್ ಚೈಲ್ಡ್ ಈಸ್ ಬಾರ್ನ್.. ಈಸ್ ಧಿಸ್ ದಿ ವರ್ಲ್ಡ್ ವಿತ್ ವಿ ಆರ್ ಲಿವಿಂಗ್ ಫಾರ್ ಟುಡೇ... ಲೈವ್ ಏಡ್ ಷೋನಲ್ಲಿ ಆತ ಹಾಡಿದ ಕೊನೆಯ ಹಾಡಿನ ಸಾಲುಗಳು ಆತ್ಮನಿವೇದನೆಯಂತಿದ್ದವು. ಹೊಸ ಹುಟ್ಟಿಗೆ ನಿರಂತರ ತುಡಿವ ಜಗತ್ತಿನ ಮನಕಿದು ತಾಗಿತು. ನಮ್ಮ ಮನಸಿಗೆ ತಾಗಿದಂತೆ..